# ಮರೆಯಲಿ ಹ್ಯಾಂಗ; ಬಹುಮಾನದ ಪುಳಕ..!

ಭಾವಗೀತೆಯಲ್ಲಿ ಪ್ರಥಮ ಬಹುಮಾನ ಪಡೆದ ನನಗೆ ಖ್ಯಾತ ವಿಮರ್ಶಕರಾದ ಪ್ರೊ. ಕೀರ್ತಿನಾಥ ಕುರ್ತಕೋಟಿ ಅವರಿಂದ ಬಹುಮಾನ ಪಡೆದಾಗ ಒಂದು ಕ್ಷಣ ರೋಮಾಂಚನವಾಯಿತು. ಅವರ ಹಸ್ತಗಳಿಂದ ಪಾರಿತೋಷಕ ಪಡೆದ ಆ ದಿನ ನಾನು ಎಂದಿಗೂ ಮರೆಯಲಾರೆ.

■ ಚಿತ್ರ-ಬರಹ: ಮೇಘನಾ ಜಯತೀರ್ಥ ಜಹಗೀರದಾರ



ಪ್ರೊ. ಕೀರ್ತಿನಾಥ ಕುರ್ತಕೋಟಿ ಅವರಿಂದ ಬಹುಮಾನ ಪಡೆಯುತ್ತಿರುವುದು.

ಜೀವನದ ಕೆಲವೊಂದು ಕ್ಷಣಗಳು ನೆನಪಾಗಿ ಅಲ್ಲ ಮಧುರ ನೆನಪಾಗಿ ಮೆಲುಕು ಹಾಕುವ ಹಾಗೆ ಮಾಡುತ್ತವೆ. ಈ ನೆನಪುಗಳು ಕೊಡುವ ಖುಷಿಯೇ ಬೇರೆ. ಅದನ್ನು ಅನುಭವಿಸುವ ಮನಸ್ಸು ನಮ್ಮದಾಗಿರಬೇಕು. ಹಾಗೆ ನನ್ನ ಜೀವನದ ಮೂವತ್ತು ವರುಷದ ಹಿಂದಿನ ಆ ಕ್ಷಣ ಹಂಚಿಕೊಳ್ಳುವಾಗ ನಾನು ಪುಳಕಗೊಳ್ಳುತ್ತೇನೆ.

ನನ್ನ ತಾಯಿ ಸಂಗೀತಗಾರ್ತಿ. ಎಲ್ಲ ತರಹದ ಹಾಡು ಹಾಡುತ್ತಾರೆ. ಹಾಗೆ ನನ್ನ ತಂದೆ, ಅಣ್ಣ, ತಮ್ಮ ಮತ್ತು ತಂಗಿ ಎಲ್ಲರೂ ತಕ್ಕಮಟ್ಟಿಗೆ ಹಾಡುವವರೇ. ಮನೆಯಲ್ಲಿ ಸಂಗೀತದ ನಿನಾದ ಯಾವಾಗಲೂ ಕೇಳಿ ಬರುತ್ತಿರುತ್ತದೆ. ಇಂಥ ಪರಿಸರದಲ್ಲಿ ಬೆಳೆದ ನಾನು ಕೂಡಾ ಎಲ್ಲರ ಪ್ರೋತ್ಸಾಹದಿಂದ ಸಂಗೀತವನ್ನು ಅಭ್ಯಸಿಸುತ್ತ ಗುರುಗಳಿಂದ ಬೆನ್ನು ತಟ್ಟಿಸಿಕೊಂಡವಳೇ.

ಮದುವೆಯ ನಂತರ ನನ್ನ ಪತಿಗೆ ಸಾಹಿತ್ಯದೊಂದಿಗೆ ಸಂಗೀತದಲ್ಲಿ ಆಸಕ್ತಿ ಇದ್ದ ಕಾರಣ ನನ್ನ ಅಭಿರುಚಿಯನ್ನು ಮೆಚ್ಚಿ ಸಾಕಿ ಸಲುಹಿದರು. ಅವರು ಕೆ.ವಿ.ಜಿ. ಬ್ಯಾಂಕ್ ಉದ್ಯಮಿ. ನಾವಿರುವುದು ಸಂಗೀತ–ಸಾಹಿತ್ಯದ ತವರಾದ ಕಲಾವಿದರನ್ನು ಹುಟ್ಟು ಹಾಕುವ, ಬೆಳೆಸುವ ಸುಂದರ ನಗರ ಧಾರವಾಡ. ನಮ್ಮ ಬ್ಯಾಂಕ್‌ನಲ್ಲಿ ಪ್ರತಿ ವರುಷ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದರು. ನಾನು ಪ್ರತಿ ವರುಷ ಕಾವ್ಯ–ಗಾಯನ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನ ಗಿಟ್ಟಿಸಿಕೊಳ್ಳುತ್ತಿದ್ದೆ. ಮಕ್ಕಳು ಇತರೆ ಸ್ಪರ್ಧೆಯಲ್ಲಿ ಬಹುಮಾನ ಪಡೆಯುತ್ತಿದ್ದರು.

ಹಾಗೆ ಒಂದು ವರುಷ ಧಾರವಾಡದ ಕವಿ ದ.ರಾ. ಬೇಂದ್ರೆಯವರ ಭಾವಗೀತೆಗಳ ಸ್ಪರ್ಧೆ ಏರ್ಪಡಿಸಿದ್ದರು. ನಾನು ಆ ದಿನ 'ನನ್ನ ಕೈ ಹಿಡಿದಾಕೆ ಅಳುನುಂಗಿ ನಗು ಒಮ್ಮೆ' ಎಂಬ ಬೇಂದ್ರೆಯವರ ಭಾವಪೂರ್ಣ ಭಾವಗೀತೆಯನ್ನು ಹಾಡಿದೆ. ಪ್ರಥಮ ಬಹುಮಾನ ಬಂತು. ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ಕಲಾವಿದರು ಧಾರವಾಡದ ಕಲಾ ಭವನ ಎಂಬ ಸಭಾ ಭವನದಲ್ಲಿ ಮತ್ತೊಮ್ಮೆ ಹಾಡುವ ಅವಕಾಶ; ಅಂದೇ ಬಹುಮಾನ ವಿತರಣೆ ಎಂದು ಬ್ಯಾಂಕಿನ ಆಯೋಜಕರು ಸೂಚಿಸಿದರು. ಅಂದು ಹಾಡಿದ ನಂತರ ಬಹುಮಾನ ವಿತರಣೆಗೆ ವೇದಿಕೆಯ ಮೇಲೆ ಇದ್ದ ವ್ಯಕ್ತಿ ಖ್ಯಾತ ವಿಮರ್ಶಕರಾದ ಪ್ರೊ. ಕೀರ್ತಿನಾಥ ಕುರ್ತಕೋಟಿ. ಒಂದು ಕ್ಷಣ ರೋಮಾಂಚನವಾಯಿತು. ಅವರ ಹಸ್ತಗಳಿಂದ ಪಾರಿತೋಷಕ ಪಡೆದ ಆ ದಿನ ನಾನು ಎಂದಿಗೂ ಮರೆಯಲಾರೆ.

ಬಾಲ್ಯದ ದಿನಗಳಲ್ಲಿ, ನಂತರ ಮಹಿಳಾ ಮಂಡಳ, ದೇವರ ಸ್ತುತಿಯ ಭಜನೆಯ ಕಾರ್ಯಕ್ರಮಗಳಲ್ಲಿ ಮತ್ತು ಸ್ನೇಹಿತೆಯರ ಒಡನಾಟದಲ್ಲಿ ಅನೇಕ ಬಹುಮಾನಗಳನ್ನು ಪಡೆದದ್ದು ಇದೆ. ಆದರೆ ಅಂಥ ತುಂಬು ಹೃದಯದ, ಹಿರಿಯ ಅಸಾಧಾರಣ ವ್ಯಕ್ತಿಯ ಸಾಮೀಪ್ಯದಿಂದ ದೊರೆತ ಈ ಬಹುಮಾನ ನನ್ನ ಜೀವನದ ಮರೆಯದ ಕ್ಷಣಗಳು. ಸವಿ ಸವಿ ನೆನಪುಗಳು ಕೂಡಾ.

ಸಾಹಿತ್ಯಾಸಕ್ತರಾದ ನನ್ನ ಪತಿಗೂ ಪ್ರೊ. ಕೀರ್ತಿನಾಥ ಕುರ್ತಕೋಟಿ ಅವರಿಂದ ನಾನು ಬಹುಮಾನ ಗಳಿಸಿದ್ದು ತುಂಬಾ ಸಂತೋಷವಾಯಿತು. ಸರಳ ಸಜ್ಜನಿಕೆ, ಉದಾರ ಗುಣದ ಪ್ರೊ. ಕೀರ್ತಿನಾಥ ಕುರ್ತಕೋಟಿ ಅವರನ್ನು ನಾನು ಧಾರವಾಡದ ಮನೋಹರ ಗ್ರಂಥಮಾಲೆಯಲ್ಲಿ ಅನೇಕ ಸಾರಿ ನೋಡಿದ್ದುಂಟು. ನನ್ನ ತಂದೆ ವಯಸ್ಸಿನ ಆ ಮಹಾ ಸಾಧಕನ ಮುಗುಳ್ನಗೆಯೊಂದಿಗೆ ಸಿಕ್ಕ ಬಹುಮಾನದ ಕ್ಷಣ ಚಿರಸ್ಮರಣೀಯ. ■